# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ರಾಜ್ಯದಲ್ಲಿ ಮೀನುಗಾರಿಕೆ ಸಹಕಾರ ಸಂಘಗಳನ್ನು ಕ್ರಮಬದ್ಧವಾಗಿ ಸಂಘಟಿಸಲು ಸಾಧ್ಯತಾ ವರದಿ ನೀಡುವಾಗ ಕೆಲವೊಂದು ಮಾರ್ಗಸೂಚಿಗಳನ್ನು ಅನುಸರಿಸುವ ಬಗ್ಗೆ.

ಓದಲಾಗಿದೆ:- (1) ಪತ್ರ ಸಂಖ್ಯೆ:ಪಸಂಮೀ/143/ಮೀಇಇ/2012,
ದಿನಾಂಕ:25-02-2013.

(2) ಪತ್ರ ಸಂಖ್ಯೆ:ಎಫ್‌ಸಿಎಸ್/13/2012-13,
ದಿನಾಂಕ:16-07-2013.

******

**ಪ್ರಸ್ತಾವನೆ:**

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಪತ್ರದಲ್ಲಿ, ಹೊಸ ಮೀನುಗಾರರ ಸಹಕಾರ ಸಂಘಗಳ ನೋಂದಣಿಗೆ ಮೀನುಗಾರಿಕೆ ಇಲಾಖೆ ವತಿಯಿಂದ ಸಾಧ್ಯತಾ ವರದಿ ನೀಡುವ ಕುರಿತು ಬಂದ ಮನವಿಗಳ ಹಿನ್ನೆಲೆಯಲ್ಲಿ, ಸದರಿ ಮನವಿಗಳ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಅಗತ್ಯ ಮಾಹಿತಿಯೊಂದಿಗೆ ವಿಸ್ತೃತ ವರದಿಯನ್ನು ಕಳುಹಿಸುವಂತೆ ಮತ್ತು ಹೊಸದಾಗಿ ಮೀನುಗಾರಿಕೆ ಸಹಕಾರ ಸಂಘಗಳ ನೋಂದಣಿಗೆ ಅನುಮತಿ ನೀಡುವುದನ್ನು ಮುಂದಿನ ಆದೇಶದವರೆಗೆ ತಡೆಹಿಡಿಯುವಂತೆ ತಿಳಿಸಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು ಇವರ ಪತ್ರದಲ್ಲಿ, ಕರ್ನಾಟಕ ರಾಜ್ಯದಲ್ಲಿ ಹೊಸದಾಗಿ ಮೀನುಗಾರರ ಸಹಕಾರ ಸಂಘಗಳನ್ನು ನೊಂದಾಯಿಸುವಾಗ ನಿಬಂಧಕರು, ಸಹಕಾರ ಇಲಾಖೆರವರ ಸಂಖ್ಯೆ:ಓಟಿಎಸ್/22/ಹೆಚ್‌ಓಟಿ/99-2000 ದಿನಾಂಕ:17-05-1999ರ ಸುತ್ತೋಲೆಯ ಪ್ರಕಾರ ಸಹಕಾರ ಇಲಾಖೆಯಿಂದ ಮೀನುಗಾರರ ಸಹಕಾರ ಸಂಘಗಳ ನೋಂದಾವಣಿ ಪೂರ್ವ ಮೀನುಗಾರಿಕೆ ಇಲಾಖೆಯಿಂದ ಸಾಧ್ಯತಾ ವರದಿಯನ್ನು ಪಡೆದೇ ಮೀನುಗಾರರ ಸಹಕಾರ ಸಂಘಗಳನ್ನು ನೋಂದಾಯಿಸುವಂತೆ ಆದೇಶ ಹೊರಡಿಸಲಾಗಿದೆ. ಅದರಂತೆ ಮೀನುಗಾರರ ಸಹಕಾರ ಸಂಘಗಳನ್ನು ನೋಂದಾಯಿಸುವ ಪೂರ್ವ ಸಾಧ್ಯತಾ ವರದಿಯನ್ನು ಕೋರಿ ಬರುವ ಎಲ್ಲಾ ಪ್ರಸ್ತಾವನೆಗಳನ್ನು ಮೀನುಗಾರಿಕೆ ಇಲಾಖೆಯು ನಿಯಮಾನುಸಾರ ಪರಿಶೀಲಿಸಿ ಸ್ಥಳೀಯ ಅಧಿಕಾರಿಗಳ ಸ್ಪಷ್ಟ ಅಭಿಪ್ರಾಯದೊಂದಿಗೆ ನಿಯೋಜಿತ ಸಂಘದ ಆರ್ಥಿಕ ಸದೃಢತೆಗೆ ಬೇಕಾದ ಜಲಸಂಪನ್ಮೂಲಗಳು ಹಾಗೂ ಇತರ ಪೂರಕ ಮಾಹಿತಿಗಳನ್ನು ದೃಢೀಕರಿಸಿಕೊಂಡು ಮೀನುಗಾರಿಕೆ ಇಲಾಖೆಯು ಸಾಧ್ಯತಾ ವರದಿಯನ್ನು ನೀಡುತ್ತಾ ಬಂದಿರುತ್ತದೆಂದು ತಿಳಿಸಿರುತ್ತಾರೆ.

ಮುಂದುವರೆದು, ಸರ್ಕಾರದ ನಿರ್ದೇಶನದನ್ವಯ ಇತ್ತೀಚೆಗೆ ಹೊಸದಾಗಿ ಯಾವುದೇ ಮೀನುಗಾರರ ಸಹಕಾರ ಸಂಘಗಳನ್ನು ಸ್ಥಾಪಿಸಲು ಮೀನುಗಾರಿಕೆ ಇಲಾಖೆಯು ಸಾಧ್ಯತಾ ವರದಿಗಳನ್ನು ನೀಡುತ್ತಿರುವುದಿಲ್ಲ. ಮೀನುಗಾರಿಕೆ ಇಲಾಖೆಯು ಮೀನುಗಾರರ ಸಹಕಾರ ಸಂಘಗಳನ್ನು ನೊಂದಾಯಿಸಲು ಸಾಧ್ಯತಾ ವರದಿ ನೀಡುವ ಬಗ್ಗೆ ಸ್ಪಷ್ಟ ಮಾರ್ಗಸೂಚಿಗಳನ್ನು ರೂಪಿಸಲು ನೆರೆ ರಾಜ್ಯಗಳಾದ, ತಮಿಳುನಾಡು, ಕೇರಳ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರ ಸರ್ಕಾರಗಳು ಮೀನುಗಾರರ ಸಹಕಾರ ಸಂಘಗಳನ್ನು ನೋಂದಾಯಿಸುವಾಗ ಅಳವಡಿಸಿಕೊಂಡಿರುವ ರಾಜ್ಯಗಳ ಮಾರ್ಗಸೂಚಿಗಳ ಆದೇಶಗಳನ್ನು ಪಡೆದು, ಸದರಿ ಮಾರ್ಗಸೂಚಿಗಳನ್ವಯ ತುಲನಾತ್ಮಕವಾಗಿ ಪರಿಶೀಲಿಸಿ, ಮೀನುಗಾರರು ಮಾತ್ರ ಮೀನುಗಾರರ ಸಹಕಾರ ಸಂಘಗಳ ಸದಸ್ಯರನ್ನಾಗಿಸಲು ಇಲಾಖಾ ಮಾರ್ಗಸೂಚಿಗಳನ್ನು ಅನುಬಂಧ-1 ಮತ್ತು 2ರಲ್ಲಿ ಒದಗಿಸಿರುತ್ತಾರೆ. ಈ ಮಾರ್ಗಸೂಚಿಗಳನ್ವಯ ಒಳನಾಡು ಮತ್ತು ಕರಾವಳಿ ಭಾಗದ ಎಲ್ಲಾ ವರ್ಗದ ವೃತ್ತಿನಿರತ ಮೀನುಗಾರರು ಮಾತ್ರ ಮೀನುಗಾರರ ಸಹಕಾರ ಸಂಘಗಳ ಸದಸ್ಯರಾಗಲು ಸಾಧ್ಯವಾಗುತ್ತದೆ. ಆದ್ದರಿಂದ, ಅನುಬಂಧ-1 ಮತ್ತು ಅನುಬಂಧ-2ರ ಮಾರ್ಗಸೂಚಿಗಳನ್ನು ಸರ್ಕಾರದ ಆದೇಶದ ಮೂಲಕ ಹೊರಡಿಸುವಂತೆ ಹಾಗೂ ಈಗಾಗಲೇ ನೀಡಿರುವ ತಡೆಯಾಜ್ಞೆಯನ್ನು ತೆರವುಗೊಳಿಸುವಂತೆ ಮೀನುಗಾರಿಕೆ ನಿರ್ದೇಶಕರು ಕೋರಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಆದೇಶ ಸಂಖ್ಯೆ:ಪಸಂಮೀ 143 ಮೀಇಇ 2012, ಬೆಂಗಳೂರು ದಿನಾಂಕ:13-08-2013**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಪತ್ರ ಸಂಖ್ಯೆ:ಪಸಂಮೀ/143/ಮೀಇಇ/2012, ದಿನಾಂಕ:25-02-2013ರಲ್ಲಿ ನೀಡಿರುವ ತಡೆಯಾಜ್ಞೆಯನ್ನು ಹಿಂಪಡೆಯಲಾಗಿದೆ. ರಾಜ್ಯದಲ್ಲಿ ಹೊಸ ಮೀನುಗಾರಿಕೆ ಸಹಕಾರ ಸಂಘಗಳನ್ನು ಕ್ರಮಬದ್ಧವಾಗಿ ಸಂಘಟಿಸಲು ಸಾಧ್ಯತಾ ವರದಿ ನೀಡುವಾಗ ಈ ಆದೇಶದ ಅನುಬಂಧ-1 ಮತ್ತು 2ರಲ್ಲಿ ನಮೂದಿಸಿರುವ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರಭಾರ)
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ(ಮೀ)

ಇವರಿಗೆ:

1) ಮಹಾಲೇಖಪಾಲರು (ಎ ಮತ್ತು ಇ)(ಆಡಿಟ್ 1 ಮತ್ತು 2), ಕರ್ನಾಟಕ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು
4) ಎಲ್ಲಾ ಮೀನುಗಾರಿಕೆ ಉಪ ನಿರ್ದೇಶಕರುಗಳಿಗೆ – ಮೀನುಗಾರಿಕೆ ನಿರ್ದೇಶಕರ ಮುಖಾಂತರ.
5) ಮಾನ್ಯ ಯುವಜನ ಸೇವಾ ಮತ್ತು ಮೀನುಗಾರಿಕೆ ರಾಜ್ಯಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
6) ಶಾಖಾ ರಕ್ಷಾ ಕಡತ:ಹೆಚ್ಚಿನ ಪ್ರತಿಗಳು.

ಹಿಂಬರಹ ಸಂಖ್ಯೆ. ಎಫ್.ಸಿ.ಎಸ್./13/2012-13

ಮೀನುಗಾರಿಕೆ ನಿರ್ದೇಶನಾಲಯ
ಬೆಂಗಳೂರು-1
ದಿನಾಂಕ 19-8-2013.

ಸರ್ಕಾರದ ಆದೇಶ ಪತ್ರವನ್ನು ಹಿಂಬರಹದೊಂದಿಗೆ ರಾಜ್ಯದ ಎಲ್ಲಾ ಮೀನುಗಾರಿಕೆ ಅಧೀನಾಧಿಕಾರಿಗಳಿಗೆ ರವಾನಿಸಲಾಗಿದೆ. ಸರ್ಕಾರದ ಪತ್ರದಲ್ಲಿ ಈ ಹಿಂದೆ ನೀಡಲಾಗಿದ್ದ ತಡೆಯಾಜ್ಞೆಯನ್ನು ತೆರವುಗೊಳಿಸಿರುವುದರಿಂದ, ಹೊಸದಾಗಿ ರಚಿಸಲು ಉದ್ದೇಶಿಸಿರುವ ಮೀನುಗಾರರ ಸಹಕಾರ ಸಂಘಗಳ ನೊಂದಣಿಗೆ ಕಡ್ಡಾಯವಾಗಿ ಈ ಆದೇಶದ ಅನುಬಂಧ-1 ಮತ್ತು 2 ರಲ್ಲಿ ನೀಡಿರುವ ಮಾರ್ಗಸೂಚಿಗಳನ್ನು ಪಾಲಿಸಲು ತಿಳಿಸಲಾಗಿದೆ.

ಸಹಿ/-
ಮೀನುಗಾರಿಕೆ ನಿರ್ದೇಶಕರು

ಗೆ:-

ಎಲ್ಲಾ ಮೀನುಗಾರಿಕೆ ಉಪನಿರ್ದೇಶಕರುಗಳಿಗೆ,
ಎಲ್ಲಾ ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರುಗಳು, ಮೀನುಗಾರಿಕೆ ಸಹಾಯಕ ನಿರ್ದೇಶಕರು(ಶ್ರೇಣಿ-1) ಮತ್ತು(2) ಹಾಗೂ ಜಿಲ್ಲಾ ನೋಡಲ್ ಅಧಿಕಾರಿಗಳು ಮತ್ತು ಎಲ್ಲಾ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.

ಮೀನುಗಾರಿಕೆ ನಿರ್ದೇಶಕರ ಪರವಾಗಿ.

ಆದೇಶ ಸಂಖ್ಯೆ:ಪಸಂಮೀ 143 ಮೀಇಇ 2012, ಬೆಂಗಳೂರು ದಿನಾಂಕ:13-08-2013ರ

## ಅನುಬಂಧ-1

ಕರ್ನಾಟಕ ರಾಜ್ಯದಲ್ಲಿ ಒಳನಾಡು ಮೀನುಗಾರರ ಸಹಕಾರ ಸಂಘಗಳನ್ನು ಹೊಸದಾಗಿ ನೋಂದಾಯಿಸಲು ಮೀನುಗಾರಿಕೆ ಇಲಾಖೆಯು ಸಾಧ್ಯತಾ ವರದಿಯನ್ನು ನೀಡುವಾಗ ಅಗತ್ಯವಾಗಿ ಪಾಲಿಸಬೇಕಾದ ಮಾರ್ಗಸೂಚಿಗಳು.

1) ನಿಯೋಜಿತ ಮೀನುಗಾರರ ಸಹಕಾರ ಸಂಘದ ಕಾರ್ಯವ್ಯಾಪ್ತಿಯು ಹಾಲಿ ಅಸ್ತಿತ್ವದಲ್ಲಿರುವ ಮತ್ತೊಂದು ಸಹಕಾರ ಸಂಘದ ಕಾರ್ಯವ್ಯಾಪ್ತಿಯನ್ನು ಅತಿಕ್ರಮಿಸಬಾರದು. ಹೋಬಳಿ ಮಟ್ಟದ, ತಾಲ್ಲೂಕು ಮಟ್ಟದ ಅಥವಾ ಜಿಲ್ಲಾ ಮಟ್ಟದಲ್ಲಿ ಹಾಲಿ ಅಸ್ತಿತ್ವದಲ್ಲಿರುವ ಮಿನುಗಾರರ ಸಹಕಾರ ಸಂಘಗಳ ವ್ಯಾಪ್ತಿಯೊಳಗೆ ಮೀನುಗಾರಿಕೆ ಇಲಾಖೆಯ ಜಲಸಂಪನ್ಮೂಲಗಳ ಗುತ್ತಿಗೆ ನಿಯಮಾವಳಿಗಳನ್ವಯ ನಿಗಧಿಪಡಿಸಿದ ಗರಿಷ್ಠ ಜಲವಿಸ್ತೀರ್ಣದ ಜಲಸಂಪನ್ಮೂಲಗಳಿಗಿಂತ ಹೆಚ್ಚು ಜಲಸಂಪನ್ಮೂಲಗಳಿದ್ದಲ್ಲಿ ಮಾತ್ರ ಹೊಸ ಮೀನುಗಾರರ ಸಹಕಾರ ಸಂಘಗಳನ್ನು ಸ್ಥಾಪಿಸಲು ಪರಿಗಣಿಸಬಹುದು.

2) ನಿಯೋಜಿತ ಮೀನುಗಾರರ ಸಹಕಾರ ಸಂಘದ ಕಾರ್ಯವ್ಯಾಪ್ತಿಯಲ್ಲಿ <u>ಕನಿಷ್ಟ</u> ಒಂದು ಜಲಸಂಪನ್ಮೂಲ ಇರಬೇಕು.

3) ನಿಯೋಜಿತ ಮೀನುಗಾರರ ಸಹಕಾರ ಸಂಘವನ್ನು ಸಂಘಟಿಸಲು ಸಂಘದ ಘೋಷಿತ ಕಾರ್ಯವ್ಯಾಪ್ತಿಯಲ್ಲಿ ಕನಿಷ್ಟ 20 ವೃತ್ತಿನಿರತ ಮೀನುಗಾರರು ಇರಬೇಕು.

4) ನಿಯೋಜಿತ ಮೀನುಗಾರರ ಸಹಕಾರ ಸಂಘದ ಸದಸ್ಯರು ಕಡ್ಡಾಯವಾಗಿ ಸಂಘದ ಘೋಷಿತ ಕಾರ್ಯವ್ಯಾಪ್ತಿಯ ಸಾಮಾನ್ಯ ನಿವಾಸಿಯಾಗಿರಬೇಕು, ಅವರು ಸಾಮಾನ್ಯ ನಿವಾಸಿಗಳೆಂದು ಪಡಿತರ ಚೀಟಿ, ಆಧಾರ್ ಚೀಟಿ, ಚುನಾವಣಾ ಗುರುತಿನ ಚೀಟಿ, ವಾಸ ಸ್ಥಳ ದೃಢೀಕರಣ ಪತ್ರ, ಜಾತಿ ಪ್ರಮಾಣ ಪತ್ರ ಅಥವಾ ಇನ್ನಿತರ ಸರ್ಕಾರದ ದಾಖಲೆಗಳ ಮುಖಾಂತರ ಖಾತರಿ ಪಡಿಸಿಕೊಳ್ಳಬೇಕು.

5) ನಿಯೋಜಿತ ಮೀನುಗಾರರ ಸಹಕಾರ ಸಂಘದ ಸದಸ್ಯರು ಮೀನುಗಾರರೆಂಬುದನ್ನು ಮೀನುಗಾರರ "ಕೌಶಲ್ಯ ಪರೀಕ್ಷೆ" ಮುಖಾಂತರ ದೃಢೀಕರಿಸಿಕೊಳ್ಳಬೇಕು.

6) ಹಾಲಿ ಕಾರ್ಯನಿರ್ವಹಿಸುತ್ತಿರುವ ಮೀನುಗಾರರ ಸಹಕಾರ ಸಂಘದ ವ್ಯಾಪ್ತಿಯಲ್ಲಿ ಹೊಸ ಮೀನುಗಾರರ ಸಹಕಾರ ಸಂಘಗಳನ್ನು ಸ್ಥಾಪಿಸಲು ಅರ್ಜಿ ಬಂದಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಘಗಳಲ್ಲೇ ಸದಸ್ಯತ್ವವನ್ನು ಪಡೆದುಕೊಳ್ಳಲು ಆ ಸಹಕಾರ ಸಂಘಗಳು ಸಮ್ಮತಿಸಿದಲ್ಲಿ ಮಾತ್ರ ಸದಸ್ಯತ್ವವನ್ನು ಪಡೆದುಕೊಳ್ಳಬಹುದು.

7) ನಿಯೋಜಿತ ಸಂಘದ ಸದಸ್ಯರು ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರ ಪ್ರಕಾರ ಅರ್ಹತೆಯನ್ನು ಹೊಂದಿರಬೇಕು.

8) <u>"ಮೀನುಗಾರರ ಕೌಶಲ್ಯ ಪರೀಕ್ಷೆ".</u>

ಮೀನುಗಾರರ ಸಹಕಾರ ಸಂಘದ ಸದಸ್ಯರಾಗ ಬಯಸುವವರಿಗೆ ಈ ಕೆಳಗಿನಂತೆ ಅರ್ಹತೆಗಳಿರಬೇಕು.

ಅ) ಈಜಲು ಬರಬೇಕು. (ಮಹಿಳೆಯರಿಗೆ ಅನ್ವಯಿಸುವುದಿಲ್ಲ) ಅರ್ಜಿದಾರರು ಕನಿಷ್ಟ 25 ಮೀಟರ್‌ನಷ್ಟು ಈಜಲು ಸಾಮರ್ಥ್ಯ ಹೊಂದಿರಬೇಕು.

-2-

2 ಆ) ಬೀಸು ಬಲೆಯನ್ನು ಬಳಸಿ ಮೀನು ಹಿಡಿಯಲು ದಕ್ಷರಾಗಿರಬೇಕು. ಬಲೆ ಬೀಸಿದಾಗ ಬೀಸು ಬಲೆ ಕನಿಷ್ಟ ಶೇ.60ರಷ್ಟು ವೃತ್ತಾಕಾರದಲ್ಲಿರಬೇಕು.

3 ಇ) ಎಳೆ ಬಲೆಯನ್ನು ಬಳಸಿ ಮೀನು ಹಿಡಿಯುವಾಗ ತಳಭಾಗದ "ಕಾಲಿನ ಹಗ್ಗದಡಿ" ಮೀನುಗಳು ನುಸುಳದಂತೆ ಬಲೆಯನ್ನು ಬಳಸಬಲ್ಲವರಾಗಬೇಕು.

4 ಈ) ಬಿಡು ಬಲೆಯನ್ನು ತೆಪ್ಪ ಅಥವಾ ಹರಿಗೋಲು ಬಳಸಿ ಆಳವಾದ ನೀರಿನಲ್ಲಿ ಬಲೆ ನೇರವಾಗಿ ನಿಲ್ಲುವಂತೆ ಬಳಸುವ ಕೌಶಲ್ಯವಿರಬೇಕು.

5 ಉ) ಮೀನು ಹಿಡಿಯುವ ಬಲೆಗಳನ್ನು ರಿಪೇರಿ ಮಾಡಲು ತಿಳಿದಿರಬೇಕು.

6 ಊ) ಮೀನುಗಾರಿಕೆ ಇಲಾಖೆಯ ತರಬೇತಿ ಕೇಂದ್ರದಲ್ಲಿ ತರಬೇತಿ ಹೊಂದಿರಬೇಕು. (ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ಅಥವಾ ಇಲಾಖೆಯ ಮೀನುಗಾರಿಕೆ ತರಬೇತಿ ಕೇಂದ್ರಗಳಲ್ಲಿ ತರಬೇತಿ ಹೊಂದಿರಬೇಕು) ಆ ಬಗ್ಗೆ ಪ್ರಮಾಣ ಪತ್ರ ಹೊಂದಿರಬೇಕು.

7 ಋ) ಮೀನು ಮಾರಾಟದಲ್ಲಿ ತೊಡಗಿಸಿಕೊಂಡಿರಬೇಕು. ಈ ಬಗ್ಗೆ ಮಾರಾಟ ಮಾಡುವ ಛಾಯಾಚಿತ್ರ ಮುಖಾಂತರ ಸ್ಥಳೀಯ ಅಧಿಕಾರಿ ಸ್ಥಳ ಪರಿಶೀಲನೆ ಮಾಡಿ ದೃಢೀಕರಿಸಬೇಕು.

8 ಎ) ವೃತ್ತಿಯಲ್ಲಿ ಮೀನುಗಾರರಾಗಿರಬೇಕು ಅಥವಾ ಸಕ್ರಿಯ ಮೀನುಗಾರರಾಗಿರಬೇಕು ಎಂಬುದನ್ನು ಸಂಬಂಧಪಟ್ಟ ಅಧಿಕಾರಿ ದೃಢೀಕರಿಸಬೇಕು.

ಪುರುಷ ಸದಸ್ಯರುಗಳು ಮೇಲಿನ ಅರ್ಹತೆಗಳಲ್ಲಿ ಕನಿಷ್ಟ 5 ಅರ್ಹತೆಗಳನ್ನು ಹೊಂದಿರಬೇಕು. ಆದರೆ, ಈಜಲು ಬರುವುದು ಕಡ್ಡಾಯ. ಮಹಿಳಾ ಸದಸ್ಯರು ಕನಿಷ್ಟ ಮೇಲಿನ 3 ಅರ್ಹತೆಗಳನ್ನು ಹೊಂದಿರಬೇಕು.

9) "ಕೌಶಲ್ಯ ಪರೀಕ್ಷೆ"ಯನ್ನು ಈ ಕೆಳಕಂಡ ಸದಸ್ಯರನ್ನೊಳಗೊಂಡ ಸಮಿತಿಯು ನಡೆಸುವುದು.

ಅ) ಸಂಬಂಧಪಟ್ಟ ವಲಯದ ಮೀನುಗಾರಿಕೆ ಉಪ ನಿರ್ದೇಶಕರು – ಅಧ್ಯಕ್ಷರು
ಆ) ಸಂಬಂಧಪಟ್ಟ ಜಿಲ್ಲಾ ಮಟ್ಟದ ಮೀನುಗಾರಿಕೆ ಅಧಿಕಾರಿ – ಸದಸ್ಯರು
ಇ) ಸಂಬಂಧಪಟ್ಟ ತಾಲ್ಲೂಕು ಮಟ್ಟದ ಮೀನುಗಾರಿಕೆ ಅಧಿಕಾರಿ – ಸಂಚಾಲಕರು
ಈ) ನಿಯೋಜಿತ ಮೀನುಗಾರರ ಸಹಕಾರ ಸಂಘದ ಮುಖ್ಯ ಪ್ರವರ್ತಕರು – ಸದಸ್ಯರು.
ಉ) ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಅಧ್ಯಕ್ಷರು ಅಥವಾ ಕಾರ್ಯದರ್ಶಿ – ಸದಸ್ಯರು

10) ಕೌಶಲ್ಯ ಪರೀಕ್ಷಾ ಸಮಿತಿಯ ಸಂಚಾಲಕರು ಸದಸ್ಯತ್ವ ಕೋರುವ ಅರ್ಜಿದಾರರಿಗೆ ಕೌಶಲ್ಯ ಅರ್ಹತೆ ಪರೀಕ್ಷೆ ನಡೆಯುವ ಸ್ಥಳ, ವೇಳೆ, ದಿನಾಂಕವನ್ನು ಒಂದು ವಾರದ ಮುಂಚೆ ತಿಳಿಸತಕ್ಕದ್ದು. ಇದನ್ನು ಟಪಾಲ್‌ನಲ್ಲಿ ನೇರವಾಗಿ ಅಥವಾ ಗ್ರಾಮದಲ್ಲಿ ಟಾಮ್ ಟಾಮ್ ಮಾಡಿಸಿ ಅಥವಾ ಗ್ರಾಮ ಪಂಚಾಯಿತಿಯ ನೋಟೀಸ್ ಬೋರ್ಡ್‌ನಲ್ಲಿ ಪ್ರಚಾರ ಪಡಿಸುವುದು.

11) ಕೌಶಲ್ಯ ಅರ್ಹತೆ ಪರೀಕ್ಷೆಯನ್ನು ವಿಡಿಯೋ ಮೂಲಕ ಚಿತ್ರಿಸಿ ಅದರ ಒಂದು ಸಾಫ್ಟ್ ಕಾಪಿಯನ್ನು ಅರ್ಹತೆ ಪರೀಕ್ಷೆಯ ಫಲಿತಾಂಶದೊಂದಿಗೆ ನಿಯೋಜಿತ ಸಂಘದ ಪ್ರಸ್ತಾವನೆಯೊಡನೆ ಮೀನುಗಾರಿಕೆ ನಿರ್ದೇಶನಾಲಯಕ್ಕೆ ಸಲ್ಲಿಸತಕ್ಕದ್ದು.

(ಜಯಲಕ್ಷ್ಮಿ) 13/8/13
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರಭಾರ)
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ(ಮೀ)

## ಅನುಬಂಧ-2

ಕರ್ನಾಟಕ ರಾಜ್ಯದಲ್ಲಿ ಕರಾವಳಿ ಮೀನುಗಾರರ ಸಹಕಾರ ಸಂಘಗಳನ್ನು ನೋಂದಾಯಿಸಲು ಮೀನುಗಾರಿಕೆ ಇಲಾಖೆಯು ಸಾಧ್ಯತಾ ವರದಿಯನ್ನು ನೀಡುವಾಗ ಅಗತ್ಯವಾಗಿ ಪಾಲಿಸಬೇಕಾದ ಮಾರ್ಗಸೂಚಿಗಳು.

1) ನಿಯೋಜಿತ ಮೀನುಗಾರರ ಸಂಘದ ಕಾರ್ಯವ್ಯಾಪ್ತಿಯು ಹಾಲಿ ಅಸ್ತಿತ್ವದಲ್ಲಿರುವ ಮತ್ತೊಂದು ಸಹಕಾರ ಸಂಘದ ಕಾರ್ಯವ್ಯಾಪ್ತಿಯನ್ನು ಅತಿಕ್ರಮಿಸಬಾರದು.

2) ನಿಯೋಜಿತ ಸಂಘದ ಕಾರ್ಯವ್ಯಾಪ್ತಿಯಲ್ಲಿ ಅದೇ ಉದ್ದೇಶ ಹೊಂದಿದ ಮತ್ತೊಂದು ಮೀನುಗಾರರ ಸಂಘ ಇರಕೂಡದು.

3) ನಿಯೋಜಿತ ಸಂಘದ ಸದಸ್ಯತ್ವವನ್ನು ಕೋರಿದ ಅರ್ಜಿದಾರರು ಹಾಲಿ ಕಾರ್ಯನಿರ್ವಹಿಸುತ್ತಿರುವ ಬೇರೆ ಯಾವುದೇ ಮೀನುಗಾರಿಕೆ ಸಹಕಾರ ಸಂಘಗಳಲ್ಲಿ ಸದಸ್ಯರಾಗಿರಕೂಡದು.

4) ನಿಯೋಜಿತ ಮೀನುಗಾರರ ಸಹಕಾರ ಸಂಘದಲ್ಲಿ ಕನಿಷ್ಟ 20 ವೃತ್ತಿ ನಿರತ ಮೀನುಗಾರರು ಇರಬೇಕು.

5) ನಿಯೋಜಿತ ಮೀನುಗಾರರ ಸಹಕಾರ ಸಂಘದ ಸದಸ್ಯರು ಕಡ್ಡಾಯವಾಗಿ ಸಂಘದ ಘೋಷಿತ ಕಾರ್ಯವ್ಯಾಪ್ತಿಯ ಸಾಮಾನ್ಯ ನಿವಾಸಿಯಾಗಿರಬೇಕು, ಅವರು ಸಾಮಾನ್ಯ ನಿವಾಸಿಗಳೆಂದು ಪಡಿತರ ಚೀಟಿ, ಆಧಾರ್ ಚೀಟಿ, ಚುನಾವಣಾ ಗುರುತಿನ ಚೀಟಿ, ವಾಸ ಸ್ಥಳ ದೃಢೀಕರಣ ಪತ್ರ, ಜಾತಿ ಪ್ರಮಾಣ ಪತ್ರ ಅಥವಾ ಇನ್ನಿತರ ಸರ್ಕಾರದ ದಾಖಲೆಗಳ ಮುಖಾಂತರ ಖಾತರಿ ಪಡಿಸಿಕೊಳ್ಳಬೇಕು.

6) ನಿಯೋಜಿತ ಮೀನುಗಾರರ ಸಹಕಾರ ಸಂಘದ ಸದಸ್ಯರು ಮೀನುಗಾರರೆಂಬುದನ್ನು ಮೀನುಗಾರರ ಕೌಶಲ್ಯ ಪರೀಕ್ಷಾ ಮುಖಾಂತರ ದೃಢೀಕರಿಸಿಕೊಳ್ಳಬೇಕು.

7) ಹಾಲಿ ಕಾರ್ಯನಿರ್ವಹಿಸುತ್ತಿರುವ ಮೀನುಗಾರರ ಸಹಕಾರ ಸಂಘದ ವ್ಯಾಪ್ತಿಯಲ್ಲಿ ಹೊಸ ಮೀನುಗಾರರ ಸಹಕಾರ ಸಂಘಗಳನ್ನು ಸ್ಥಾಪಿಸಲು ಅರ್ಜಿ ಬಂದಲ್ಲಿ, ಹಾಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಘಗಳಲ್ಲೇ ಸದಸ್ಯತ್ವವನ್ನು ಪಡೆದುಕೊಳ್ಳಲು ಆ ಸಹಕಾರ ಸಂಘಗಳು ಸಮ್ಮತಿಸಿದಲ್ಲಿ ಮಾತ್ರ ಸದಸ್ಯತ್ವವನ್ನು ಪಡೆದುಕೊಳ್ಳಬಹುದು.

8) ನಿಯೋಜಿತ ಸಂಘದ ಸದಸ್ಯರು ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರ ಪ್ರಕಾರ ಅರ್ಹತೆಯನ್ನು ಹೊಂದಿರಬೇಕು.

9) <u>ಮೀನುಗಾರರ ಸಹಕಾರ ಸಂಘದ ಸದಸ್ಯರುಗಳು ಈ ಕೆಳಗಿನಂತೆ ಅರ್ಹತೆಗಳು ಇರಬೇಕು.</u>

   ಅ) ಸದಸ್ಯರಾಗ ಬಯಸುವವರಿಗೆ ಈಜಲು ಬರಬೇಕು. (ಮಹಿಳೆಯರಿಗೆ ಅನ್ವಯಿಸುವುದಿಲ್ಲ) ಅರ್ಜಿದಾರರು ಕನಿಷ್ಟ 25 ಮೀಟರ್‌ನಷ್ಟು ಈಜಲು ಸಾಮರ್ಥ್ಯ ಹೊಂದಿರಬೇಕು.

   ಆ) ಬೀಸು ಬಲೆ ಬೀಸಿದಾಗ ಬೀಸು ಬಲೆ ಕನಿಷ್ಟ ಶೇ.60ರಷ್ಟು ವೃತ್ತಾಕಾರದಲ್ಲಿರಬೇಕು.

ಇ) ಎಳೆ ಬಲೆಯನ್ನು ಬಳಸಿ ಮೀನು ಹಿಡಿಯುವಾಗ ತಳಭಾಗದ ಕಾಲಿನ ಹಗ್ಗದಡಿ ಮೀನುಗಳು ನುಸುಳದಂತೆ ಬಲೆಯನ್ನು ಬಳಸುವಂತವರಾಗಿರಬೇಕು.

ಈ) ಬಿಡು ಬಲೆಯನ್ನು ನಾಡ ದೋಣಿಯಲ್ಲಿ / ಮೋಟಾರೀಕೃತ ದೋಣಿಯಲ್ಲಿ ಆಳವಾದ ನೀರಿನಲ್ಲಿ ಬಲೆ ನೇರವಾಗಿ ನಿಲ್ಲುವಂತೆ ಬಳಸುವ ಕೌಶಲ್ಯವಿರಬೇಕು.

ಉ) ಮೀನು ಹಿಡಿಯುವ ಬಲೆಗಳನ್ನು ರಿಪೇರಿ ಮಾಡಲು ತಿಳಿದಿರಬೇಕು.

ಊ) ಮೀನುಗಾರಿಕೆ ಇಲಾಖೆಯ ತರಬೇತಿ ಕೇಂದ್ರದಲ್ಲಿ ತರಬೇತಿ ಹೊಂದಿರಬೇಕು. (ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ಅಥವಾ ಮೀನುಗಾರಿಕೆ ಇಲಾಖೆಯ ತರಬೇತಿ ಕೇಂದ್ರಗಳಲ್ಲಿ ತರಬೇತಿ ಹೊಂದಿರಬೇಕು) ಆ ಬಗ್ಗೆ ಪ್ರಮಾಣ ಪತ್ರ ಹೊಂದಿರಬೇಕು.

ಋ) ಮೀನು ಮಾರಾಟದಲ್ಲಿ ತೊಡಗಿಸಿಕೊಂಡಿರಬೇಕು. ಈ ಬಗ್ಗೆ ಮಾರಾಟ ಸ್ಥಳದ ಛಾಯಾಚಿತ್ರ ಮುಖಾಂತರ ಸ್ಥಳೀಯ ಅಧಿಕಾರಿ ಸ್ಥಳ ಪರಿಶೀಲನೆ ಮಾಡಿ ದೃಢೀಕರಿಸಬೇಕು.

ಎ) ವೃತ್ತಿಯಲ್ಲಿ ಮೀನುಗಾರರಾಗಿರಬೇಕು ಅಥವಾ ಸಕ್ರಿಯ ಮೀನುಗಾರರಾಗಿರಬೇಕು ಎಂಬುದನ್ನು ಸಂಬಂಧಪಟ್ಟ ಅಧಿಕಾರಿ ದೃಢೀಕರಿಸಬೇಕು.

ಏ) ಮೀನು ಸ್ವಚ್ಛಗೊಳಿಸುವವರು, ಧಕ್ಕೆ, ಬಂದರು, ಜೆಟ್ಟಿಯಲ್ಲಿ ಹಾಗೂ ಮೀನುಗಾರಿಕಾ ದೋಣಿಗಳಲ್ಲಿ ಮೀನುಗಾರಿಕೆಗೆ ಸಂಬಂಧಿಸಿದ ನೇರ ಕರ್ತವ್ಯಗಳಲ್ಲಿ ತೊಡಗಿರುವವರಾಗಿರಬೇಕು.

ಪುರುಷ ಸದಸ್ಯರುಗಳು ಮೇಲಿನ ಅರ್ಹತೆಗಳಲ್ಲಿ ಕನಿಷ್ಟ 3 ಅರ್ಹತೆಗಳನ್ನು ಹೊಂದಿರಬೇಕು. ಆದರೆ, <u>ಈಜಲು ಬರುವುದು ಕಡ್ಡಾಯ.</u> ಮಹಿಳಾ ಸದಸ್ಯರು ಕನಿಷ್ಟ ಮೇಲಿನ 2 ಅರ್ಹತೆಗಳನ್ನು ಹೊಂದಿರಬೇಕು.

10) ಕೌಶಲ್ಯ ಪರೀಕ್ಷೆಯನ್ನು ಈ ಕೆಳಕಂಡ ಸದಸ್ಯರನ್ನೊಳಗೊಂಡ ಸಮಿತಿಯು ನಡೆಸುವುದು.

ಅ) ಸಂಬಂಧಪಟ್ಟ ವಲಯದ ಮೀನುಗಾರಿಕೆ ಉಪ ನಿರ್ದೇಶಕರು - ಅಧ್ಯಕ್ಷರು
ಆ) ಸಂಬಂಧಪಟ್ಟ ಜಿಲ್ಲಾ ಮಟ್ಟದ ಮೀನುಗಾರಿಕೆ ಅಧಿಕಾರಿ - ಸದಸ್ಯರು
ಇ) ಸಂಬಂಧಪಟ್ಟ ತಾಲ್ಲೂಕು ಮಟ್ಟದ ಮೀನುಗಾರಿಕೆ ಅಧಿಕಾರಿ - ಸಂಚಾಲಕರು
ಈ) ನಿಯೋಜಿತ ಮೀನುಗಾರರ ಸಂಘದ ಮುಖ್ಯ ಪ್ರವರ್ತಕರು - ಸದಸ್ಯರು
ಉ) ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಅಧ್ಯಕ್ಷರು ಅಥವಾ ಕಾರ್ಯದರ್ಶಿ - ಸದಸ್ಯರು

11) ಕೌಶಲ್ಯ ಪರೀಕ್ಷಾ ಸಮಿತಿಯ ಸಂಚಾಲಕರು ಸದಸ್ಯತ್ವ ಕೋರುವ ಅರ್ಜಿದಾರರಿಗೆ ಕೌಶಲ್ಯ ಅರ್ಹತೆ ಪರೀಕ್ಷೆ ನಡೆಯುವ ಸ್ಥಳ, ವೇಳೆ, ದಿನಾಂಕವನ್ನು ಒಂದು ವಾರದ ಮುಂಚೆ ಅರ್ಜಿದಾರರಿಗೆ ತಿಳಿಸತಕ್ಕದ್ದು. ಇದನ್ನು ಟಪಾಲ್‌ನಲ್ಲಿ ನೇರವಾಗಿ ಗ್ರಾಮದಲ್ಲಿ ಟಾಮ್ ಟಾಮ್ ಮಾಡಿಸಿ ಅಥವಾ ಗ್ರಾಮ ಪಂಚಾಯಿತಿಯ ನೋಟೀಸ್ ಬೋರ್ಡಿನಲ್ಲಿ ಪ್ರಚಾರ ಪಡಿಸುವುದು.

12) ಕೌಶಲ್ಯ ಅರ್ಹತೆ ಪರೀಕ್ಷೆಯನ್ನು ವಿಡಿಯೋ ಮೂಲಕ ಚಿತ್ರಿಸಿ ಅದರ ಒಂದು ಸಾಫ್ಟ್ ಕಾಪಿಯನ್ನು ಅರ್ಹತೆ ಪರೀಕ್ಷೆ ಫಲಿತಾಂಶದೊಂದಿಗೆ ನಿಯೋಜಿತ ಸಂಘದ ಪ್ರಸ್ತಾವನೆಯೊಡನೆ ಮೀನುಗಾರಿಕೆ ನಿರ್ದೇಶನಾಲಯಕ್ಕೆ ಸಲ್ಲಿಸತಕ್ಕದ್ದು.

(ಜಯಲಕ್ಷ್ಮಿ) 13/8/13
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರಭಾರ)
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ(ಮೀ)

ಸಂಖ್ಯೆ:ಮೀನಿ/ಎಫ್‌ಸಿಎಸ್/36/2018

ಮೀನುಗಾರಿಕೆ ನಿರ್ದೇಶನಾಲಯ
3ನೇ ಮಹಡಿ, ಪೋಡಿಯಂ ಬ್ಲಾಕ್,
ವಿ.ವಿ.ಕೇಂದ್ರ, ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-1, ದಿನಾಂಕ:01-06-2018.

## ಸುತ್ತೋಲೆ

ವಿಷಯ:- ಮೀನುಗಾರಿಕೆ ಇಲಾಖೆ - ಹೊಸದಾಗಿ ಮೀನುಗಾರರ ಸಹಕಾರ ಸಂಘಗಳನ್ನು ರಚಿಸುವ ಬಗ್ಗೆ ಮಾರ್ಗಸೂಚಿಗಳನ್ನು ಪಾಲಿಸುವ ಕುರಿತು.

ಉಲ್ಲೇಖ:- ಸರ್ಕಾರದ ಆದೇಶ ಪತ್ರ ಸಂಖ್ಯೆ:ಪಸಂಮೀ 143 ಮೀಇಇ 2012 ದಿನಾಂಕ:13-08-2013.

------

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರದ ಆದೇಶದಲ್ಲಿ ರಾಜ್ಯದಲ್ಲಿ ಹೊಸ ಮೀನುಗಾರಿಕೆ ಸಹಕಾರ ಸಂಘಗಳನ್ನು ಕ್ರಮಬದ್ಧವಾಗಿ ಸಂಘಟಿಸಲು ಸಾಧ್ಯತಾ ವರದಿ ನೀಡುವಾಗ ಈ ಆದೇಶದ ಅನುಬಂಧ-1 ಮತ್ತು 2ರಲ್ಲಿ ನಮೂದಿಸಿರುವ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಆದೇಶಿಸಲಾಗಿದೆ. ಆದಾಗ್ಯೂ ಹೊಸದಾಗಿ ಮೀನುಗಾರರ ಸಹಕಾರ ಸಂಘಗಳನ್ನು ಸ್ಥಾಪಿಸುವ ಸಂಬಂಧ ಅಧೀನಾಧಿಕಾರಿಗಳು ಪ್ರಸ್ತಾವನೆಗಳನ್ನು ಸಲ್ಲಿಸುವ ಸಂದರ್ಭದಲ್ಲಿ ಉಲ್ಲೇಖಿತ ಮಾರ್ಗಸೂಚನೆಯನ್ನು ಕಟ್ಟುನಿಟ್ಟಾಗಿ ಪಾಲಿಸದೇ ಅಪೂರ್ಣವಾದ ಮಾಹಿತಿಗಳಿಂದ ಕೂಡಿದ ಪ್ರಸ್ತಾವನೆಗಳನ್ನು ನಿರ್ದೇಶನಾಲಯಕ್ಕೆ ಸಲ್ಲಿಸುತ್ತಿರುವುದು ಕಂಡುಬಂದಿದೆ. ಮತ್ತು ಸ್ಥಳೀಯ ಮೀನುಗಾರರು ಹೊಸ ಸಂಘಗಳ ರಚನೆ ಬಗ್ಗೆ ಅವರ ಗಮನಕ್ಕೆ ಬಂದಿರುವುದಿಲ್ಲವೆಂದು ಗಂಭೀರ ಆರೋಪಗಳು ಬಂದಿವೆ.

ಆದುದರಿಂದ, ಇನ್ನು ಮುಂದೆ ಹೊಸದಾಗಿ ಮೀನುಗಾರರ ಸಹಕಾರ ಸಂಘಗಳನ್ನು ಸ್ಥಾಪಿಸಲು ಪ್ರಸ್ತಾವನೆಗಳನ್ನು ಸಲ್ಲಿಸುವ ಸಂದರ್ಭದಲ್ಲಿ ಉಲ್ಲೇಖಿತ ಆದೇಶದ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದರ ಜೊತೆಗೆ ಮೀನುಗಾರರ ಸಹಕಾರ ಸಂಘಗಳನ್ನು ಸ್ಥಾಪಿಸುವ ಬಗ್ಗೆ ಸಂಬಂಧಪಟ್ಟ ಗ್ರಾಮ ಪಂಚಾಯಿತಿಗಳ ಸಾಮಾನ್ಯ ಸಭೆಯಲ್ಲಿ ವಿಷಯವನ್ನು ಮಂಡಿಸಿ, ಅನುಮೋದನೆ ಪಡೆದು ವೃತ್ತಿನಿರತ ಮೀನುಗಾರ ಸದಸ್ಯರನ್ನು ಆಯ್ಕೆಗೊಳಿಸಿರುವ ಬಗ್ಗೆ ಖಾತ್ರಿಪಡಿಸಿಕೊಂಡು ತಮ್ಮ ದೃಢೀಕರಣದೊಂದಿಗೆ ಪ್ರಸ್ತಾವನೆಗಳನ್ನು ಸಲ್ಲಿಸುವುದು. ಹಾಗೂ ಹಾಲಿ ಕಾರ್ಯನಿರ್ವಹಿಸುತ್ತಿರುವ ಮೀನುಗಾರರ ಸಹಕಾರ ಸಂಘಗಳು ಕಾರ್ಯವ್ಯಾಪ್ತಿ ತಿದ್ದುಪಡಿಗೆ ಪ್ರಸ್ತಾವನೆ ಸಲ್ಲಿಸುವ ಸಂದರ್ಭದಲ್ಲಿ ಹೊಸದಾಗಿ ಸೇರ್ಪಡೆಗೊಳ್ಳಲಿರುವ ಗ್ರಾಮಗಳ ನಿಯೋಜಿತ ಸದಸ್ಯರನ್ನು ಕೌಶಲ್ಯ ಪರೀಕ್ಷೆಗೊಳಪಡಿಸಿ ಅರ್ಹರಿದ್ದಲ್ಲಿ ಮಾತ್ರ ಪ್ರಸ್ತಾವನೆ ಸಲ್ಲಿಸುವಂತೆ ಸಹಾ ಇಲಾಖೆಯ ಎಲ್ಲಾ ಸಂಬಂಧಪಟ್ಟ ಅಧಿಕಾರಿಗಳಿಗೆ ಈ ಮೂಲಕ ಸೂಚಿಸಲಾಗಿದೆ. ಸಂಘಗಳ ಕಾರ್ಯವ್ಯಾಪ್ತಿ ಒಂದಕ್ಕಿಂತ ಹೆಚ್ಚು ಗ್ರಾಮಪಂಚಾಯಿತಿಗಳಿಗೆ ಒಳಪಟ್ಟಿದ್ದಲ್ಲಿ ತಾಲ್ಲೂಕು ಪಂಚಾಯಿತಿ ಸಭೆಯಲ್ಲಿ ಮಂಡಿಸಿ/ಸ್ಥಳೀಯ ಸಂಸ್ಥೆಗಳಿಗೆ ಒಳಪಟ್ಟಿದ್ದಲ್ಲಿ (ಸಂಬಂಧಪಟ್ಟ ಪಟ್ಟಣ/ನಗರ ಸಭೆ/ಪುರಸಭೆ/ಮಹಾನಗರ ಪಾಲಿಕೆ ) ಸಂಬಂಧಪಟ್ಟ ಸಂಸ್ಥೆಗಳ ಸಭೆಗಳಲ್ಲಿ ಮಂಡಿಸಿ ಅನುಮೋದನೆ ಪಡೆದು ಸಲ್ಲಿಸಲು ತಿಳಿಸಿದೆ.

ಸಹಿ/-
ಮೀನುಗಾರಿಕೆ ನಿರ್ದೇಶಕರು,

ಇವರಿಗೆ:

ಎಲ್ಲಾ ಮೀನುಗಾರಿಕೆ ಉಪನಿರ್ದೇಶಕರು,
ಎಲ್ಲಾ ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು,/ಮೀನುಗಾರಿಕೆ ಸಹಾಯಕ ನಿರ್ದೇಶಕರು(ಶ್ರೇಣಿ-1).
ಎಲ್ಲಾ ಮೀನುಗಾರಿಕೆ ಸಹಾಯಕ ನಿರ್ದೇಶಕರು(ಶ್ರೇಣಿ-2),

ಸಂಖ್ಯೆ ಮೀಇ/ಎಫ್‌ಸಿಎಸ್/36/2018

ಮೀನುಗಾರಿಕೆ ನಿರ್ದೇಶನಾಲಯ
3ನೇ ಮಹಡಿ, ಪೋಡಿಯಂ ಬ್ಲಾಕ್,
ವಿ.ವಿ.ಗೋಪುರ, ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-1, ದಿನಾಂಕ:28-02-2019

## ಸುತ್ತೋಲೆ

ವಿಷಯ:- ಮೀನುಗಾರಿಕೆ ಇಲಾಖೆ - ಹೊಸದಾಗಿ ಮೀನುಗಾರರ ಸಹಕಾರ ಸಂಘಗಳನ್ನು ರಚಿಸುವ ಬಗ್ಗೆ ಮಾರ್ಗಸೂಚಿಗಳನ್ನು ಪಾಲಿಸುವ ಕುರಿತು.

ಉಲ್ಲೇಖ:-1) ಸರ್ಕಾರದ ಆದೇಶ ಪತ್ರ ಸಂಖ್ಯೆ:ಪಸಂಮೀ 143 ಮೀಇಸ 2012 ದಿನಾಂಕ:13-08-2013.

2) ಕೇಂದ್ರ ಕಚೇರಿಯ ಇದೇ ಸಂಖ್ಯೆಯ ಸುತ್ತೋಲೆ ದಿನಾಂಕ:1-06-2018.

---

ವಿಷಯದ ಕುರಿತಂತೆ ಹೊಸದಾಗಿ ಮೀನುಗಾರರ ಸಹಕಾರ ಸಂಘಗಳನ್ನು ಸ್ಥಾಪಿಸಲು ಪ್ರಸ್ತಾವನೆಗಳನ್ನು ಸಲ್ಲಿಸುವ ಸಂದರ್ಭದಲ್ಲಿ ಉಲ್ಲೇಖಿತ(1)ರ ಆದೇಶದ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದರ ಜೊತೆಗೆ ಇದರ ಮುಂದೆ ಉಲ್ಲೇಖ(2)ರ ಸುತ್ತೋಲೆಯನ್ವಯ ಪ್ರಸ್ತಾವನೆಗಳನ್ನು ಸಲ್ಲಿಸಲು ಸೂಚಿಸಲಾಗಿದೆ. ಆದಾಗ್ಯೂ, ಮೀನುಗಾರರ ಸಹಕಾರ ಸಂಘಗಳನ್ನು ಸ್ಥಾಪಿಸುವ ಸಂದರ್ಭಗಳಲ್ಲಿ ಸಂಘಗಳ ಕಾರ್ಯವ್ಯಾಪ್ತಿ ಒಂದಕ್ಕಿಂತ ಹೆಚ್ಚು ಗ್ರಾಮ ಪಂಚಾಯಿತಿಗಳಿಗೆ ಒಳಪಟ್ಟಿದ್ದಲ್ಲಿ ಸಂಬಂಧಪಟ್ಟ ಗ್ರಾಮ ಪಂಚಾಯಿತಿಗಳ ಸಾಮಾನ್ಯ ಸಭೆಯಲ್ಲಿ ಒಪ್ಪಿಗೆ ಪಡೆದ ಪಾಲಿಕೆ ವ್ಯಾಪ್ತಿಗಳಲ್ಲಿ ಸಂಘಗಳ ಪ್ರಸ್ತಾವನೆಗಳನ್ನು ಪರಿಗಣಿಸುವುದು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪ್ರಸ್ತಾಪಿತ ಕಾರ್ಯವ್ಯಾಪ್ತಿಯು ವಾರ್ಡ್ ಮಟ್ಟಕ್ಕೆ ಸೀಮಿತವಾಗಿದ್ದಲ್ಲಿ ವಾರ್ಡ್ ಸಮಿತಿ ಸಭೆಯಲ್ಲಿ ಒಪ್ಪಿಗೆ ಪಡೆದ ನಂತರ, ಪಾಲಿಕೆ ವ್ಯಾಪ್ತಿಯಲ್ಲಿನ ಪಟ್ಟಣದ ಒಂದು ವಾರ್ಡ್‌ಗಿಂತ ಹೆಚ್ಚು ವಾರ್ಡ್‌ಗಳ ವ್ಯಾಪ್ತಿಗೊಳಪಟ್ಟಲ್ಲಿ ಒಪ್ಪಿಗೆ ಪಡೆದಿದ್ದಲ್ಲಿ ಹೊಸ ಸಂಘಗಳನ್ನು ಸ್ಥಾಪಿಸಲು ಪರಿಗಣಿಸಲು ಸೂಚಿಸಲಾಗಿದೆ.

ಮೀನುಗಾರಿಕೆ ನಿರ್ದೇಶಕರು,
28/2/2019

ಇವರಿಗೆ:
ಎಲ್ಲಾ ಮೀನುಗಾರಿಕೆ ಉಪನಿರ್ದೇಶಕರು,
ಎಲ್ಲಾ ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು,/ಮೀನುಗಾರಿಕೆ ಸಹಾಯಕ ನಿರ್ದೇಶಕರು(ಶ್ರೇಣಿ-1),
ಎಲ್ಲಾ ಮೀನುಗಾರಿಕೆ ಸಹಾಯಕ ನಿರ್ದೇಶಕರು(ಶ್ರೇಣಿ-2).

ಸಹಕಾರ ಸಂಘಗಳ ನಿಬಂಧಕರ ಕಛೇರಿ, ಕರ್ನಾಟಕ ರಾಜ್ಯ ಬೆಂಗಳೂರು –560052

ಸಂಖ್ಯೆ-ಓಟಿಎಸ್:22:ಯೋಟಿ:99–2000 ದಿನಾಂಕ:17–5–99

ಸುತ್ತೋಲೆ ಸಂ.139

ವಿಷಯ:– ರಾಜ್ಯದಲ್ಲಿ ಮೀನುಗಾರಿಕೆ ಸಹಕಾರ ಸಂಘಗಳನ್ನು ಯೋಜನಾ ಬದ್ಧವಾಗಿ ಸಂಘಟಿಸುವ ಕುರಿತು.

ಉಲ್ಲೇಖ:– ಮೀನುಗಾರಿಕಾ ನಿರ್ದೇಶನಾಲಯದ ಪತ್ರ ಸಂಎಫ್‌ಸಿಎಸ್:1:128:98–99, ದಿನಾಂಕ:31–3–99.

ಮೇಲ್ಕಂಡ ಉಲ್ಲೇಖಿದ ಪತ್ರದ ಪ್ರಕಾರ ಸರ್ಕಾರದ ಅಧಿಸೂಚನೆ ಸಂ. ಸಿಐಡಿಬಿಯುಲ್ಯ:509:ಸಿಎಲ್‌ಎಂ 96, ದಿನಾಂಕ:16–10–98 ರನ್ವಯ ಮೀನುಗಾರಿಕೆ ನಿರ್ದೇಶನಾಲಯದ ಜಂಟಿ ನಿರ್ದೇಶಕರಿಗೆ ಜಿಲ್ಲಾ ಮಟ್ಟಕ್ಕಿಂತ ಹೆಚ್ಚಿಗೆ ಕಾರ್ಯವ್ಯಾಪ್ತಿ ಇರುವ ಮೀನುಗಾರಿಕೆ ಸಹಕಾರ ಸಂಘಗಳ ನೋಂದಣಿ ಮತ್ತು ಕಾರ್ಯಗಳ ನಿರ್ವಹಣೆ, ಕಾರ್ಯಕಾರಿ ಸಮಿತಿ ರದ್ಧತಿ ಹಾಗೂ ಸಮಾಪನೆ ಮತ್ತು ಅರೆ ನ್ಯಾಯಿಕ ಅಧಿಕಾರಗಳನ್ನು ಸಹಕಾರ ಇಲಾಖೆಯ ವಿವಿಧ ಶ್ರೇಣಿಯ ಅಧಿಕಾರಿಗಳಿಗೆ ಪ್ರತ್ಯಾಯೋಜಿಸಲ್ಪಟ್ಟಿರುತ್ತದೆ.

ಆದರೆ ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದ ಆರ್ಥಿಕ ನೆರವಿನಿಂದ ''ಸಮಗ್ರ ಕರಾವಳಿ ಯೋಜನೆ'' ರೂ.23.2401 ಕೋಟಿ ಘಟಕ ವೆಚ್ಚ ಮತ್ತು ಒಳನಾಡಿನ 6 ಜಿಲ್ಲೆಗಳಿಗೆ ''ಸಮಗ್ರ ಜಲಾಶಯ ಅಭಿವೃದ್ಧಿ ಯೋಜನೆ'' ರೂ.13.406 ಕೋಟಿ ಘಟಕ ವೆಚ್ಚದಲ್ಲಿ ಅಭಿವೃದ್ಧಿ ಯೋಜನೆಗಳನ್ನು ಮೀನುಗಾರಿಕೆ ಇಲಾಖೆ ಹಮ್ಮಿಕೊಂಡಿದ್ದು, ಇದಕ್ಕಾಗಿ ಯೋಜನೆಯ ಪ್ರದೇಶಗಳಲ್ಲಿ ಮೀನುಗಾರಿಕೆ ಸಹಕಾರ ಸಂಘಗಳನ್ನು ಸ್ಥಾಪಿಸಬೇಕಾಗಿರುವುದಾಗಿ ತಿಳಿಸಿದೆ.

ಆದ್ದರಿಂದ ಈ ರೀತಿ ಮೀನುಗಾರಿಕಾ ಸಂಘಗಳನ್ನು ಸಂಘಟಿಸುವ (ನೋಂದಾಯಿಸುವ) ಮುನ್ನ ಅರ್ಜಿದಾರರು ಮೀನುಗಾರಿಕೆ ಹಾಗೂ ಸೂಚಿಸಿದ ಕಾರ್ಯ ಕ್ಷೇತ್ರದಲ್ಲಿ ಬೇಕಾದ ಜಲ ಸಂಪತ್ತು ಅಂದರೆ ಕೆರೆ : ಜಲಾಶಯ ಇತ್ಯಾದಿಯು ದೊರೆಯುವುದೇ ಎಂಬುದನ್ನು ತಿಳಿಯಲು ಸಂಬಂಧಪಟ್ಟ ಪ್ರದೇಶದ ಮೀನುಗಾರಿಕೆ ಇಲಾಖೆಯ ಅಭಿಪ್ರಾಯವನ್ನು ಕಡ್ಡಾಯವಾಗಿ ಪಡೆದು ನಂತರ ನೋಂದಾಯಿಸಬೇಕೆಂದು ಎಲ್ಲಾ ಸ್ಥಳೀಯ ಸಹಕಾರ ಇಲಾಖಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ಸಹಿ:
ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು.

ಗೆ:
ಪ್ರತಿಯನ್ನು ಮುಂದಿನ ಕ್ರಮಕ್ಕಾಗಿ ಈ ಕೆಳಕಂಡವರಿಗೆ ರವಾನಿಸಿದೆ :

1) ನಿರ್ದೇಶಕರು, ಮೀನುಗಾರಿಕೆ ನಿರ್ದೇಶನಾಲಯ, ಮಹಾವೀರ ಕಾಂಪ್ಲೆಕ್ಸ್, ಕೆ.ಜಿ. ರಸ್ತೆ, ಬೆಂಗಳೂರು.

::ನಕಲು::

ಹಿಂಬರಹ:
ಸಂಖ್ಯೆ- ಎಫ್‌ಸಿಎಸ್:1:128:98–99

ಮೀನುಗಾರಿಕೆ ನಿರ್ದೇಶನಾಲಯ,
ಬೆಂಗಳೂರು–560009,
ದಿನಾಂಕ:24ನೇ ಜೂನ್ 1999.

ಪ್ರತಿಯನ್ನು ಮಾಹಿತಿಗಾಗಿ ರವಾನಿಸಲಾಗಿದೆ.

ಸಹಿ:
ಮೀನುಗಾರಿಕೆ ನಿರ್ದೇಶಕರ ಪರವಾಗಿ.

ಗೆ:
ಮೀನುಗಾರಿಕೆ ಉಪನಿರ್ದೇಶಕರು,

ಪ್ರತಿ: ಸಂಗ್ರಹ ಕಡತಕ್ಕೆ.

ಮೀನುಗಾರಿಕೆ ನಿರ್ದೇಶಕರ ಪರವಾಗಿ. 29/6

28/6/99

ಎನ್‌ಎಸ್:25–6.

ಕರ್ನಾಟಕ ಸರ್ಕಾರ

(ಸಹಕಾರ ಇಲಾಖೆ)

ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು – 560 052

---

ಸಂಖ್ಯೆ: ಒಬಿಎಸ್:299:ಕೆಡಿಟಿ:2009-10 ದಿನಾಂಕ:26-8-2009

## ಸುತ್ತೋಲೆ

ವಿಷಯ:- ರಾಜ್ಯದಲ್ಲಿ ಮೀನುಗಾರಿಕೆ ಸಹಕಾರ ಸಂಘಗಳನ್ನು ಯೋಜನಾಬದ್ಧವಾಗಿ ಸಂಘಟಿಸುವ ಕುರಿತು.

ಉಲ್ಲೇಖ:- 1. ಮೀನುಗಾರಿಕೆ ನಿರ್ದೇಶಕರ ಪತ್ರ ಸಂ: ಎಫ್‌ಡಿಎಸ್:13: 2007-08 ದಿನಾಂಕ:9-7-2009.

2. ಸಹಕಾರ ಸಂಘಗಳ ನಿಬಂಧಕರ ಸುತ್ತೋಲೆ ಸಂ: ಒಬಿಎಸ್:22: ಕೆಡಿಟಿ:99-2000, ದಿನಾಂಕ:17-5-1999.

---

ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಒಡಬ್ಲ್ಯೂಕೆ:509: ಸಿಎಲ್‌ಎಂ 96 ದಿನಾಂಕ: 10-10-1998ರನ್ವಯ ಮೀನುಗಾರಿಕೆ ಸಹಕಾರ ಸಂಘಗಳ ನೋಂದಣಿ, ಕಾರ್ಯನಿರ್ವಹಣೆ, ಕಾರ್ಯಕಾರಿ ಸಮಿತಿ ರದ್ದತಿ, ಸಮಾಪನೆ ಮತ್ತು ಅರೆ ನ್ಯಾಯಿಕ ಅಧಿಕಾರಗಳನ್ನು ಸಹಕಾರ ಇಲಾಖೆಯ ವಿವಿಧ ಶ್ರೇಣಿಯ ಅಧಿಕಾರಿಗಳಿಗೆ ಪ್ರತ್ಯಾಯೋಜಿಸಲ್ಪಟ್ಟಿರುತ್ತದೆ.

ಪ್ರತ್ಯಾಯೋಜಿಸಲ್ಪಟ್ಟ ಅಧಿಕಾರದನ್ವಯ ಮೀನುಗಾರಿಕೆ ಸಹಕಾರ ಸಂಘಗಳನ್ನು ನೋಂದಾಯಿಸುವ ಪೂರ್ವ ಮೀನುಗಾರಿಕೆ ಕೃಷಿ ಸಂಬಂಧಿತ ಕಾರ್ಯವ್ಯಾಪ್ತಿಯಲ್ಲಿ ಜಲಸಂಪನ್ಮೂಲ ಕೆರೆ, ಜಲಾಶಯ ಇತರೆ ಸೌಲಭ್ಯಗಳು ಲಭ್ಯವಿರುವ ಬಗ್ಗೆ ಕಡ್ಡಾಯವಾಗಿ ಮೀನುಗಾರಿಕೆ ಇಲಾಖೆಯಿಂದ ಸಾಧ್ಯತಾ ವರದಿ ಪಡೆದ ನಂತರವಷ್ಟೇ ಸಹಕಾರ ಸಂಘಗಳನ್ನು ನೋಂದಾಯಿಸುವಂತೆ ಸಹಕಾರ ಇಲಾಖಾಧಿಕಾರಿಗಳಿಗೆ ಈಗಾಗಲೇ ಉಲ್ಲೇಖ-2ರ ಸುತ್ತೋಲೆಯ ಮುಖಾಂತರ ಸೂಚಿಸಲಾಗಿರುತ್ತದೆ.

ಇತ್ತೀಚೆಗೆ ಕೆಲವು ಮೀನುಗಾರಿಕೆ ಸಹಕಾರ ಸಂಘಗಳು ಅವುಗಳ ಕಾರ್ಯವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳಲು ಸಹಕಾರ ಸಂಘಗಳ ಇಲಾಖಾಧಿಕಾರಿಗಳಿಗೆ ನೇರವಾಗಿ ಪ್ರಸ್ತಾವನೆಯನ್ನು ಸಲ್ಲಿಸುತ್ತಿದ್ದು: ಸಹಕಾರ ಇಲಾಖಾಧಿಕಾರಿಗಳು, ಮೀನುಗಾರಿಕಾ ಇಲಾಖೆಯಿಂದ ಸಾಧ್ಯತಾ ವರದಿಯನ್ನು ಪಡೆಯದೆ ಬೈಲಾ ತಿದ್ದುಪಡಿ ಮಾಡಿಕೊಡುತ್ತಿರುವುದು ಮೀನುಗಾರಿಕೆ ಇಲಾಖೆಯ ಗಮನಕ್ಕೆ ಬಂದಿರುವುದು ಖೇದಕರವಾಗಿದೆ. ಸಹಕಾರ ಇಲಾಖೆಯ ಅಧಿಕಾರಿಗಳು ಮೀನುಗಾರಿಕಾ ಸಂಘಗಳ ಕಾರ್ಯವ್ಯಾಪ್ತಿಯನ್ನು ಹೆಚ್ಚಿಸಿ, ತಿದ್ದುಪಡಿ ಮಾಡುವ ಸಂದರ್ಭದಲ್ಲಿ ಇದನ್ನು ಮೀನುಗಾರಿಕೆ ಇಲಾಖೆಯ ಗಮನಕ್ಕೆ ತಂದರೆ, ಮೀನುಗಾರಿಕೆ ಇಲಾಖೆಯು ಸಾಧ್ಯತಾ ವರದಿಯನ್ನು ನೀಡುವ ಸಮಯದಲ್ಲಿ ಸದರಿ ಸಂಘವು ಘೋಷಿಸಿಕೊಂಡಿರುವ ಕಾರ್ಯವ್ಯಾಪ್ತಿಯಲ್ಲಿ ಲಭ್ಯವಿರುವ ಸಂಪನ್ಮೂಲಗಳು-ಹಾಗೂ ಹಾಲಿ ಕಾರ್ಯನಿರ್ವಹಿಸುತ್ತಿರುವ ಮೀನುಗಾರರ ಸಹಕಾರ ಸಂಘಗಳ ಕಾರ್ಯವ್ಯಾಪ್ತಿ ಅತಿಕ್ರಮವಾಗದಂತೆ ಎಚ್ಚರ ವಹಿಸಿ ಕಾರ್ಯವ್ಯಾಪ್ತಿಯನ್ನು ನಿಗಧಿಗೊಳಿಸಿ ನೋಂದಣಿಗೆ ಶಿಫಾರಸ್ಸು ಮಾಡಲಾಗುವುದೆಂಬುದಾಗಿ ಮೀನುಗಾರಿಕೆ ನಿರ್ದೇಶಕರು ತಿಳಿಸಿರುತ್ತಾರೆ.

ಆದ ಕಾರಣ ಮೀನುಗಾರರ ಸಹಕಾರ ಸಂಘ ನಿಗದಿತ ಕಾರ್ಯವ್ಯಾಪ್ತಿಯೊಡನೆ ನೋಂದಣಿಯಾದ ನಂತರ ಮತ್ತೆ ಕಾರ್ಯವ್ಯಾಪ್ತಿಯಲ್ಲಿ ಬದಲಾವಣೆ ಮಾಡಲು ಬೈಲಾ ತಿದ್ದುಪಡಿ ನೋಂದಣಿಗಾಗಿ ಪ್ರಸ್ತಾವನೆ ಸಲ್ಲಿಸಿದಾಗ ಬೈಲಾ ತಿದ್ದುಪಡಿ ಆದೇಶ ಹೊರಡಿಸುವ ಮುನ್ನ ಸಂಬಂಧಪಟ್ಟ ಕಾರ್ಯವ್ಯಾಪ್ತಿಯ ಸಹಕಾರ ಸಂಘಗಳ ಇಲಾಖಾಧಿಕಾರಿಗಳು ಮೀನುಗಾರಿಕೆ ಇಲಾಖೆಯಿಂದ

ಸಾಧ್ಯತಾ ವರದಿ ಪಡೆದ ನಂತರವೇ ಸಂಘದ ಉಪವಿಧಿಯ ತಿದ್ದುಪಡಿ ಆದೇಶ ಹೊರಡಿಸುವಂತೆ ಎಲ್ಲಾ ಸಹಕಾರ ಇಲಾಖಾಧಿಕಾರಿಗಳಿಗೆ ಈ ಮೂಲಕ ಸೂಚನೆ ನೀಡಲಾಗಿದೆ.

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 12(2)ರ ಪ್ರಕಾರ ಬೈಲಾ ತಿದ್ದುಪಡಿ ಪ್ರಸ್ತಾವನೆಯು ಕಛೇರಿಯಲ್ಲಿ ಸ್ವೀಕೃತಿಯಾದ 3 ತಿಂಗಳ ಒಳಗಾಗಿ ನೋಂದಣಿ ಮಾಡಬೇಕಾಗಿರುವುದರಿಂದ ಸಹಕಾರ ಇಲಾಖೆಯಿಂದ ಸಾಧ್ಯತಾ ವರದಿಗಾಗಿ ಮೀನುಗಾರಿಕೆ ಇಲಾಖೆಗೆ ಪ್ರಸ್ತಾವವನ್ನು ಕಳುಹಿಸಿದ 7 ದಿನಗಳ ಒಳಗಾಗಿ ಮೀನುಗಾರಿಕೆ ಇಲಾಖೆಯು ಸಾಧ್ಯತಾ ವರದಿಯನ್ನು ತಪ್ಪದೆ ಸ್ಪಷ್ಟ ಅಭಿಪ್ರಾಯಗಳೊಂದಿಗೆ ಹಿಂತಿರುಗಿಸಲು ಸಹ ಸೂಚನೆ ನೀಡಲಾಗಿದೆ.

ಸಹಿ:
(ಡಿ.ಎಸ್.ನಾಯಕ್)
ಸಹಕಾರ ಸಂಘಗಳ ನಿಬಂಧಕರು
ಕರ್ನಾಟಕ ರಾಜ್ಯ, ಬೆಂಗಳೂರು.

ಪ್ರತಿಯನ್ನು ಮುಂದಿನ ಕ್ರಮಕ್ಕಾಗಿ ಈ ಕೆಳಕಂಡವರಿಗೆ ರವಾನಿಸಿದೆ:

1. ಮೀನುಗಾರಿಕೆ ನಿರ್ದೇಶಕರು, ಮೀನುಗಾರಿಕೆ ನಿರ್ದೇಶನಾಲಯ, ಬೆಂಗಳೂರು-1.

:: ನಕಲು ::

ಹಿಂಬರಹ:ಪತ್ರ ವ್ಯ.:ಸಂಖ್ಯೆ ಎಫ್‌ಸಿಎಸ್:13:2007-08

ಮೀನುಗಾರಿಕೆ ನಿರ್ದೇಶನಾಲಯ
ಬೆಂಗಳೂರು-1,
ದಿನಾಂಕ:14-9-2009.

ನಿಬಂಧಕರು, ಸಹಕಾರ ಸಂಘಗಳ ಇಲಾಖೆರವರ ಪತ್ರವನ್ನು ಹಿಂಬರಹದೊಂದಿಗೆ ಎಲ್ಲಾ ಅಧೀನಾಧಿಕಾರಿಗಳಿಗೆ ರವಾನಿಸುತ್ತಾ, ನಿಬಂಧಕರ ಪತ್ರದಲ್ಲಿ ಸೂಚಿಸಿರುವಂತೆ ಅನುಮೋದಿತ ಕಾರ್ಯವ್ಯಾಪ್ತಿಯೊಂದಿಗೆ ನೋಂದಣಿಯಾದ ನಂತರ ಮತ್ತೆ ಕಾರ್ಯ ವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳಲು ಬೈಲಾ ತಿದ್ದುಪಡಿ ಆದೇಶ ಹೊರಡಿಸುವ ಮುನ್ನ ಮೀನುಗಾರಿಕೆ ಇಲಾಖೆಯಿಂದ ಸಾಧ್ಯತಾ ವರದಿ ಪಡೆದ ನಂತರವೇ ಸಂಘದ ಉಪನಿಯಮವು ತಿದ್ದುಪಡಿ ಆದೇಶ ಹೊರಡಿಸಲು ಸೂಚಿಸಿರುವುದನ್ನು ಕಟ್ಟುನಿಟ್ಟಾಗಿ ಪಾಲಿಸಲು ತಿಳಿಸಲಾಗಿದೆ.

ಸಹಿ:
ಮೀನುಗಾರಿಕೆ ನಿರ್ದೇಶಕರು.

ಗೆ:

ಎಲ್ಲಾ ಮೀನುಗಾರಿಕೆ ಉಪನಿರ್ದೇಶಕರುಗಳಿಗೆ.
ಎಲ್ಲಾ ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರುಗಳಿಗೆ:
ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-1) ಮತ್ತು (2) ರವರು ಹಾಗೂ ಜಿಲ್ಲಾ ನೋಂದಣಿ ಅಧಿಕಾರಿಗಳು: ಎಲ್ಲಾ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.

ಮೀನುಗಾರಿಕೆ ನಿರ್ದೇಶಕರ ಪರವಾಗಿ.

ಎಸ್‌ಬಿಎ:16-9.